1ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು.

ಸಿಸಿ ನಂ.23088/2017

ದಿಃ 21.06.2019 ರಂದು ಪ್ರಮಾಣೀಕರಿಸಲಾಯಿತು.

ಪ್ರಾಸಾಃ 1

ಚಾಸಾಃ 1

| | |
|---|---|
| ಹೆಸರು | ಃ ಪುಷ್ಪಲತಾ |
| ಗಂಡನ ಹೆಸರು | ಃ ಸುಬ್ರಮಣ್ಯಂ |
| ವಯಸ್ಸು | ಃ 56 ವರ್ಷ |
| ಉದ್ಯೋಗ | ಃ ಇನ್‌ಶ್ಯುರೆನ್ಸ್ ಏಜೆಂಟ್ |
| ವಾಸ | ಃ ಬೆಂಗಳೂರು. |

ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು 2014ನೇ ಸಾಲಿನಲ್ಲಿ ಆರೋಪಿಯನ್ನು ಬಿಎನ್‌ಐ ಪೋರಂನಲ್ಲಿ ಭೇಟಿಯೂಗಿರುತ್ತೇನೆ. ಆದಾದ ನಂತರ ಎರಡು ಬಾರಿ ಆರೋಪಿಯನ್ನು ನನ್ನ ತಂಗಿ ಮನೆ ಕಟ್ಟುವ ವಿಚಾರದಲ್ಲಿ ಆರ್ಕಿಟೆಕ್ಟ್ ಆಗಿರುವುದರಿಂದ ಭೇಟಿಯೂಗಿರುತ್ತೇವೆ. ಸದರಿ ಪರಿಚಯದಿಂದ ಆರೋಪಿಯು ನನ್ನ ಬಳಿ ಹತ್ತು ಲಕ್ಷ ರೂ ಹಣವನ್ನು ಚೆಕ್ ಮೂಲಕ ನನ್ನ ಬಳಿ ಪಡೆದಿರುತ್ತಾರೆ. ಆದಾದ ನಂತರದಲ್ಲಿ ಆರೋಪಿಯು ಕಾಫಿ ವ್ಯಾಪಾರ ಸಂಬಂಧವಾಗಿ ನನ್ನನ್ನು ಜೊತೆಗೂಡಿಸಿಕೊಳ್ಳಲು ಹೇಳಿದ್ದರಿಂದ ನಾನು ಅದಕ್ಕೆ ಒಪ್ಪಿ ಮೂರು ಲಕ್ಷ ರೂ ಹಣವನ್ನು ನೀಡಿರುತ್ತೇನೆ. ಸದರಿ ವ್ಯವಹಾಕ್ಕೋಸ್ಕರ ಆರೋಪಿ ಹಾಗೂ ನಾನು ಪಾರ್ಟನರ್ ಆಗಿ ರೂ 4,10,000/- ಹಣವನ್ನು ಸೆಕ್ಯುರಿಟಿ ಡೆಪಾಸಿಟ್‌ಗೆಂದು ನನ್ನಿಂದ ಪಾರ್ಟನರ್‌ಶಿಪ್ ಡೀಡ್‌ನ್ನು ಮಾಡಿಸಿಕೊಂಡು ವ್ಯವಹಾರಕ್ಕಾಗಿ ತೊಡಗಿಸಿಕೊಂಡಿರುತ್ತಾರೆ. ಸದರಿ ವ್ಯವಹಾರವನ್ನು ನಡೆಸಲು ಕಟ್ಟಡದ ದುರಸ್ಥಿಗಾಗಿ 3

ಲಕ್ಷ ರೂ ಹಣವನ್ನು ಸಹ ನನ್ನಿಂದ ಆರೋಪಿ ಪಡೆದುಕೊಂಡಿರುತ್ತಾರೆ. ಆದರೆ ಸದರಿ ಕಟ್ಟಡದ ದುರಸ್ಥಿಗಾಗಿ ಹಣವನ್ನು ಉಪಯೋಗಿಸದೇ ಹಳೆಯ ಸಾಮಾನುಗಳನ್ನು ಉಪಯೋಗಿಸಿ ದುರಸ್ಥಿ ಮಾಡಿರುತ್ತಾರೆ. ಆದರೆ ಸದರಿ ದುರಸ್ಥಿಯನ್ನು ಸುಮಾರು 4 ತಿಂಗಳು ಕಾಲ ಮಾಡಿರುತ್ತಾರೆ. ಆದರೆ ಅವರು ನೀಡಿದಂತಹ ಗಡವಿನ ಒಳಗಡೆ ಅವರು ಪೂರೈಸಿರುವುದಿಲ್ಲ. ಸದರಿ ಕಟ್ಟಡದ ಬಾಬತ್ತು ಬಾಡಿಗೆಯನ್ನು ಸಹ ನಾನೇ ನೀಡಿರುತ್ತೇನೆ. ಆದರೆ ಸದರಿ ಕರಾರಿನಂತೆ ಆರೋಪಿಯು ತನ್ನ ಕರ್ತವ್ಯವನ್ನು ನೇರವೇರಿಸಿರುವುದಿಲ್ಲ. ನಂತರ ಆರೋಪಿಯು ಸಾಲವಾಗಿ 25 ಸಾವಿರ ರೂ ಹಣವನ್ನು ಸಹ ನನ್ನಿಂದ ಪಡೆದಿರುತ್ತಾರೆ. ನಂತರ ನನ್ನ ಮಗಳ ಕಡೆಯಿಂದ ಹಾಗೂ ನನ್ನಿಂದ ಸೇರಿ ಒಟ್ಟು 10 ಲಕ್ಷ ರೂ ಹಣವನ್ನು ಸಹ ಆರೋಪಿಗೆ ವ್ಯವಹಾರಕ್ಕಾಗಿ ನೀಡಿರುತ್ತೇವೆ. ಆದರೆ ಆ ಮೊತ್ತವನ್ನು ಆರೋಪಿಯು ನನಗೆ ಹಿಂತಿರುಗಿಸಿರುತ್ತಾರೆ. ಆದರೆ, ಆರೋಪಿಯು ಸದರಿ ಕರಾರಿನಂತೆ ನನ್ನ ಜೊತೆ ವ್ಯವಹಾರವನ್ನು ಜರುಗಿಸಲು ಪಾಲ್ಗೊಳ್ಳುತ್ತಿರಲಿಲ್ಲ. ಸದರಿ ವ್ಯವಹಾರದ ಎಲ್ಲಾ ಕೆಲಸಗಳನ್ನು ನಾನೊಬ್ಬಳೇ ನಿರ್ವಹಿಸುತ್ತಿದ್ದೆ. ಆದ್ದರಿಂದ ಸದರಿ ವ್ಯವಹಾರದಲ್ಲಿ ನನಗೆ ತುಂಬಾ ತೊಂದರೆಯಾಗಿರುತ್ತದೆ. ಇದರ ಬಗ್ಗೆ ಆರೋಪಿಯನ್ನು ವಿಚಾರ ಮಾಡಲಾಗಿ ಸದರಿ ವ್ಯವಹಾರದ ಬಗ್ಗೆ ಯಾವುದೇ ಹಣವನ್ನು ನನಗೆ ಕೊಡುತ್ತಿಲ್ಲವೆಂದು ಆಪಾದನೆ ಮಾಡಿರುತ್ತಾರೆ. ಅಂತಿಮವಾಗಿ ಆರೋಪಿಯು ನನಗೆ ಪಾಲುದಾರಿಕೆಯಲ್ಲಿ ತೊಡಗಿಸಿದ ಹಣವನ್ನು ನೀಡದೇ ನನಗೆ ವ್ಯಾವಹರದಲ್ಲಿ ನಷ್ಟ ಉಂಟಾಗಿರುತ್ತದೆ. ಈ ವಿಚಾರವನ್ನು ಆರೋಪಿಯ ಬಳಿ ಕೇಳಲಾಗಿ ಆರೋಪಿಯು ತಿರಸ್ಕರಿಸಿದ್ದರಿಂದ ಆರೋಪಿಯ ವಿರುದ್ಧ ಪೊಲೀಸ್‌ನವರಿಗೆ ದೂರನ್ನು ಸಲ್ಲಿಸಿರುತ್ತೇನೆ. ದೂರನ್ನು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು, ಪ್ರಕರಣ ದಾಖಲಿಸಿಕೊಂಡ ಪೊಲೀಸ್‌ನವರು ಸ್ಥಳ ಪಂಚನಾಮೆಯನ್ನು ಜರುಗಿಸಿದ್ದು, ಸ್ಥಳ

ಪಂಚನಾಮೆಯನ್ನು ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು.

(ಕೋರಿಕೆಯ ಮೇರೆಗೆ ಮುಂದುವರಿದ ಮುಖ್ಯ ವಿಚಾರಣೆಗೆಂದು ಮುಂದೂಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯೊಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸ. ಇ.

1ನೇ ಅ. ಮು. ಮ. ದಂ. ನ್ಯಾಯಾಲಯ